ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರ ಹೇಳಬೇಕಾದರೆ ಇದರಲ್ಲಿ ಮಾರ್ಕೆಟಿಂಗ್ ಸೊಸೈಟಿಯವರದ್ದೇ ಆಗಲಿ ಇಲಾಖೆಯವರದ್ದೇ ಆಗಲಿ ಅವರ ಬೇಜವಾಬ್ದಾರಿ ಪ್ರಶ್ನೆ ಬರುವುದಿಲ್ಲ. ಕೆಲವು ಸಾರಿ ಹಾಕಿರತಕ್ಕಂಥ ಮೈರ್‌ಗಳನ್ನು ಇಲಿ ತಿಂದು ಹಾಕಿದರೂ ಷಾರ್ಟ್ ಸರ್ಕ್ಯೂಟ್ ಆಗುತ್ತದೆ. ಮೈರ್‌ಗಳು ಏನಾದರೂ ಸಿಕ್ಕಿ ಹಾಕಿಕೊಂಡರೂ ಕೂಡ ಷಾರ್ಟ್ ಸರ್ಕ್ಯೂಟ್ ಆಗುತ್ತದೆ. ಇದರಲ್ಲಿ ಇಲಾಖೆಯವರ ಬೇಜವಾಬ್ದಾರಿ ಇಲ್ಲ.

Sri B. B. SAYANAK.—I have given a Call Attention Notice on the 26th of last month. That question has **not come up as yet.**

MADAM SPEAKER.—I have received it and we will take it up as early as possible.

Extension of time for Election of members to the Committees, etc.

MADAM SPEAKER.—Request have been made to me by hon. members on both sides of the House that the time for filing nominations for election of members to several Committees should be extended. I have therefore fixed it as 3-00 p. m. on Wednesday the 12th April 1972 as the last hour and date for receipt of nominations to the several Committees and Senate of the Mysore University. The last hour and date for withdarwal of nominations will now be 3-00 p. m. on Thursday the 13th April. In case there is election, the date of poll and calendar of events will be intimated to hon. members in due course.

Motion of Thanks to the Governor's Address.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ನನ್ನ ಪ್ರಸ್ತಾವ ಈ ರೀತಿ ಇದೆ :

"ದಿನಾಂಕ ಮಾರ್ಚಿ 24, 1972 ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯು ಸದಸ್ಯರಾದ ನಾವು ರಾಜ್ಯಪಾಲರವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ."

ಶ್ರೀ ಆರ್. ಗುಂಡೂರಾವ್ (ಸೋಮವಾರ ಪೇಟೆ).—ನಾನು ಈ ಸೂಚನೆಯನ್ನು ಸಮರ್ಥಿಸುತ್ತೇನೆ.

ಅಧ್ಯಕ್ಷರು.— ಮಾನ್ಯ ಸದಸ್ಯರು ಮಂಡಿಸಿದ ಪ್ರಸ್ತಾವ ಈ ರೀತಿ ಇದೆ.

"ದಿನಾಂಕ ಮಾರ್ಚಿ 24, 1972 ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯು ಸದಸ್ಯರಾದ ನಾವು ರಾಜ್ಯಪಾಲರವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ."

ಮಾನ್ಯ ಸದಸ್ಯರು ಪ್ರಸ್ತಾವವನ್ನು ಮಂಡಿಸಿದ್ದಾರೆ. ಈಗ ಈ ಪ್ರಸ್ತಾವದ ಮೇರೆ ಸಭೆ ಚರ್ಚಿಸಬಹುದು.